## 3 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ಹಾಗೂ ಸಿಬಿಐ/ಎಸಿಬಿ/ಲೋಕಾಯುಕ್ತ ಪ್ರಕರಣಗಳ ವಿಶೇಷ ನ್ಯಾಯಾಲಯ, ಧಾರವಾಡ ಇವರಲ್ಲಿ

**ಎಸ್.ಸಿ. ನಂ.24/2025**

ಅ.ಸಾ.08

ಚಾ.ಸಾ.37

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಶೈಲ ಕೌಜಲಗಿ |
| ತಂದೆಯ ಹೆಸರು | : | ಶಿವಪ್ಪ |
| ವಯಸ್ಸು | : | 43 ವರ್ಷಗಳು |
| ಉದ್ಯೋಗ | : | ಪಿ.ಐ., ಕಲಘಟಗಿ ಪಿ.ಎಸ್. |
| ವಾಸಸ್ಥಳ | : | ಕಲಘಟಗಿ |
| ಸಾಕ್ಷಿಗೆ ದಿನಾಂಕ | : | **11/06/2026** ರಂದು ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ನಾನು ಮೇ 2025 ರಿಂದ ಇಲ್ಲಿಯವರೆಗೆ ಪಿ.ಐ. ಎಂದು ಕಲಘಟಗಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

02. ದಿಃ 31/12/2024 ರಂದು ಈ ಪ್ರಕರಣದ ತನಿಖೆಯನ್ನು ಚಾಸಾ.36 ರವರಿಂದ ಪಡೆದು ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಘಟನಾ ಸ್ಥಳದಲ್ಲಿ ವಸ್ತುಗಳು ನಾಶವಾಗದಂತೆ ಚಾಸಾ.27 ಹಾಗೂ 28 ರವರನ್ನು ನೇಮಿಸಿ, ಈ ಪ್ರಕರಣದಲ್ಲಿ ಮೃತರ

ಶವವನ್ನು ಕಲಘಟಗಿಯ ಸರ್ಕಾರಿ ಆಸ್ಪತ್ರೆ ಶವಾಗಾರದಲ್ಲಿ ಇದ್ದುದರಿಂದ ಚಾಸಾ.32 ರವರನ್ನು ಬೆಂಗಾವಲಿಗಾಗಿ ನೇಮಿಸಿದೆನು.

03. ಅದೇ ದಿನ ಬೆಳಿಗ್ಗೆ 11.00 ಗಂಟೆಗೆ ಚಾಸಾ.1 ರವರೊಂದಿಗೆ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಮೃತಳ ಶವ ಪಂಚನಾಮೆಯನ್ನು ಚಾಸಾ.2 ಮತ್ತು 3 ರವರ ಸಮಕ್ಷಮ ಜರುಗಿಸಿರುತ್ತೆನೆ. ಸದರಿ ಮೃತಳ ಶವ ಪಂಚನಾಮೆಯನ್ನು ಈಗ ನಿಶಾನೆ.ಪಿ.18 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.18(ಎ) ಎಂದು ಗುರ್ತಿಸಲಾಯಿತು. ಆ ಸಮಯದಲ್ಲಿ ಫೋಟೋಗಳನ್ನು ತೆಗೆಸಿರುತ್ತೆನೆ. 2 ಫೋಟೋಗಳನ್ನು ಈಗ ನಿಶಾನೆ.ಪಿ.19 ಎಂದು ಗುರ್ತಿಸಲಾಯಿತು. ಸಿಡಿಯನ್ನು ನಿಶಾನೆ.ಪಿ.20 ಎಂದು ಗುರ್ತಿಸಲಾಯಿತು.

04. ನಂತರ ಮೃತಳ ಶವದ ಪಿಎಂ ಮಾಡಿಸುವ ಕುರಿತು ಕೋರಿಕೆ ಕೊಟ್ಟಿರುತ್ತೆನೆ. ನಂತರ ಚಾಸಾ.33 ರವರಿಂದ ಕಲಂ 63(4)(ಸಿ) ಬಿಎನ್.ಎಸ್.ಎಸ್. ಪ್ರಮಾಣ ಪತ್ರ ಪಡೆದಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ಈಗ ನಿಶಾನೆ.ಪಿ.21 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.21(ಎ) ಎಂದು ಗುರ್ತಿಸಲಾಯಿತು.

05. ದಿಃ 31/12/2024 ರಂದು ಚಾಸಾ.1 ರವರ ಪುನಃ ಹೇಳಿಕೆಯನ್ನು ನಿಶಾನೆ.ಪಿ.8 ರಂತೆ ಪಡೆದುಕೊಂಡಿರುತ್ತೆನೆ. ನಂತರ ಅದೇ ದಿನ ಚಾಸಾ.1 ರವರು

ತೋರಿಸಿದ ಘಟನಾ ಸ್ಥಳವನ್ನು ಪರಿಶೀಲಿಸಿ ಚಾಸಾ.2 ಮತ್ತು 4 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿ ಘಟನಾ ಸ್ಥಳದಲ್ಲಿಯ ವಸ್ತುಗಳಾದ ಸುಮಾರು 4 ಫೂಟ್ 3 ಇಂಚು ಉದ್ದ ಹಾಗೂ ಅಲ್ಲಲ್ಲಿ ರಕ್ತ ಹತ್ತಿದ ಕಾಡು ಕಟ್ಟಿಗೆ ಬಡಿಗೆ, ಸುಮಾರು 14 ಇಂಚು ಉದ್ದ ಕಟ್ಟಿಗೆ ಹಿಡಿಕೆಯುಳ್ಳ ಒಂದು ಬಡಿಗೆ ಹರಿತವಾಗಿರುವ ಮುಂದೆ ಚೂಪು ಇರುವ ಅಲ್ಲಲ್ಲಿ ರಕ್ತ ಹತ್ತಿದ ಚಾಕು, ರಕ್ತ ಹತ್ತಿದ ಮಣ್ಣು, ರಕ್ತ ಹತ್ತದೇ ಇರುವ ಮಣ್ಣು, ಇವುಗಳನ್ನು ಸುಕೋ ಅಧಿಕಾರಿ ಚಾಸಾ.22 ರವರಿಂದ ಪ್ಯಾಕ್ ಮಾಡಿ ಸೀಲ್ ಮಾಡಿಸಿರುತ್ತೇನೆ. ಘಟನಾ ಸ್ಥಳ ಹಾಗೂ ಜಪ್ತು ಪಂಚನಾಮೆಯನ್ನು ಈಗಾಗಲೇ ನಿಶಾನೆ.ಪಿ.4 ಎಂದು ಗುರ್ತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.4(ಬಿ) ಎಂದು ಗುರ್ತಿಸಲಾಯಿತು. ಸುಮಾರು 4 ಫೂಟ್ 3 ಇಂಚು ಉದ್ದ ಹಾಗೂ ಅಲ್ಲಲ್ಲಿ ರಕ್ತ ಹತ್ತಿದ ಕಾಡು ಕಟ್ಟಿಗೆ ಬಡಿಗೆ ಎಂದು ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯನ್ನು ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆಮಾಲು 6 ಎಂದು ಗುರ್ತಿಸಲಾಗಿದೆ. ಸುಮಾರು 14 ಇಂಚು ಉದ್ದ ಕಟ್ಟಿಗೆ ಹಿಡಿಕೆಯುಳ್ಳ ಒಂದು ಬಡಿಗೆ ಹರಿತವಾಗಿರುವ ಮುಂದೆ ಚೂಪು ಇರುವ ಅಲ್ಲಲ್ಲಿ ರಕ್ತ ಹತ್ತಿದ ಚಾಕು ಎಂದು ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯನ್ನು ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆಮಾಲು 2 ಎಂದು ಗುರ್ತಿಸಲಾಗಿದೆ. ರಕ್ತ ಹತ್ತಿದ ಮಣ್ಣು ಎಂದು ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ರಕ್ತ ಹತ್ತಿದ ಮಣ್ಣನ್ನು ಗುರುತಿಸಿದ್ದು, ಅದನ್ನು ಈಗ ಮುದ್ದೆಮಾಲು 7 ಎಂದು ಗುರ್ತಿಸಲಾಯಿತು. ರಕ್ತ ಹತ್ತದೇ ಇರುವ ಮಣ್ಣು ಎಂದು ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ರಕ್ತ ಹತ್ತದೆ ಇರುವ ಮಣ್ಣನ್ನು ಗುರುತಿಸಿದ್ದು, ಅದನ್ನು ಈಗ

ಮುದ್ದೆಮಾಲು 8 ಎಂದು ಗುರ್ತಿಸಲಾಯಿತು. ನಂತರ ಸ್ಥಳದಲ್ಲಿ ನಿಶಾನೆ.ಪಿ.5 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.5(ಬಿ) ಎಂದು ಗುರ್ತಿಸಲಾಯಿತು. 3 ಫೋಟೋಗಳನ್ನು ತೆಗೆಸಿರುತ್ತೇನೆ. ಅವುಗಳಲ್ಲಿ 2 ಫೋಟೋಗಳನ್ನು ಈಗಾಗಲೇ ನಿಶಾನೆ.ಪಿ.3 ಎಂದು ಗುರ್ತಿಸಲಾಗಿದೆ. ಈಗ ಒಂದು ಫೋಟೋವನ್ನು ನಿಶಾನೆ.ಪಿ.22 ಎಂದು ಗುರ್ತಿಸಲಾಯಿತು. ಸಿಡಿಯನ್ನು ನಿಶಾನೆ.ಪಿ.23 ಎಂದು ಗುರ್ತಿಸಲಾಯಿತು.

06. ನಂತರ ಪ್ರಕರಣದಲ್ಲಿ ಸಾಕ್ಷಿದಾರರಾದ ಚಾಸಾ.2, 8, 10 ರಿಂದ 15 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾಸಾ.15 ರವರು ನನ್ನ ಮುಂದೆ ನಿಶಾನೆ.ಪಿ.11 ರಂತೆ ಹೇಳಿಕೆ ಕೊಟ್ಟಿರುತ್ತಾರೆ. ನಂತರ ಈ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ನ್ಯಾಯಾಲಯಕ್ಕೆ ಪಿ.ಎಫ್ ನಂ.188/2024 ದಾಖಲಿಸಿರುತ್ತೇನೆ.

07. ನಂತರ ಅದೇ ದಿನ ಚಾಸಾ.32 ರವರು ತಮ್ಮ ವರದಿಯೊಂದಿಗೆ ಪಿಎಂ ಪರೀಕ್ಷೆ ನಂತರ ಠಾಣೆಗೆ ಬಂದು ಮೃತಳ ದೇಹವನ್ನು ವಾರಸುದಾರರಿಗೆ ನೀಡಿದ ಕುರಿತು ಪಡೆದ ಪಾವತಿ ರಸೀದಿ ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿರುತ್ತೇನೆ. ಸದರಿ ಪಾವತಿ ರಸೀದಿಯನ್ನು ಈಗಾಗಲೇ ನಿಶಾನೆ.ಪಿ.2 ಎಂದು ಗುರ್ತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.2(ಬಿ) ಎಂದು ಗುರ್ತಿಸಲಾಯಿತು. ನಂತರ ಅದೇ ದಿನ ಚಾಸಾ.32 ಮತ್ತು 35 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

08. ನಂತರ ಅದೇ ದಿನ ಚಾಸಾ.29 ರವರಿಗೆ ಗಾಯಾಳು ಹಾಗೂ ಆರೋಪಿಯ ರಕ್ತ ಹತ್ತಿದ ಬಟ್ಟೆಯನ್ನು ಪ್ಯಾಕ ಮಾಡಿ ಪೂರೈಸುವಂತೆ ಮನವಿ ಪತ್ರ ಕೊಟ್ಟು ಕಿಮ್ಸ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಅದೇ ದಿನ ಚಾಸಾ.23 ರಿಂದ 26 ರವರಿಗೆ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ಆರೋಪಿ 1 ಮತ್ತು 2 ರವರ ಬೆಂಗಾವಲಿಗಾಗಿ ನೇಮಿಸಿರುತ್ತೆನೆ

09. ದಿಃ 02/01/2025 ರಂದು ಆರೋಪಿ 2 ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದರಿಂದ ಚಾಸಾ.25 ಮತ್ತು 26 ರವರು ಆರೋಪಿತ 2 ನನ್ನ ಮುಂದೆ ಹಾಜರುಪಡಿಸಿದ್ದರಿಂದ ಆತನಿಗೆ ವಿಚಾರಣೆ ಮಾಡಿ, ಸ್ವ ಖುಷಿ ಹೇಳಿಕೆಯನ್ನು ಪಡೆದುಕೊಂಡು ಅದರಲ್ಲಿ ಅಪರಾಧ ಮಾಡಿದ ಬಗ್ಗೆ ಆರೋಪಿ ಒಪ್ಪಿಕೊಂಡಿದ್ದರಿಂದ ಆತನನ್ನು ದಸ್ತಗಿರಿ ಮಾಡಿ ನಿಯಮಗಳನ್ನು ಪಾಲಿಸಿ ಯೋಗ್ಯ ಬೆಂಗಾವಲಿನಲ್ಲಿ ಠಾಣೆಯಲ್ಲಿ ಇರಿಸಿದೆನು. ಅದೇ ದಿನ ಚಾಸಾ.25 ಮತ್ತು 26 ರವರ ಹೇಳಿಕೆಯನ್ನು ಪಡೆದಿರುತ್ತೆನೆ.

10. ದಿಃ 03/01/2025 ರಂದು ಕೌಂಟರ್ ಕೇಸ್ ಪ್ರಕರಣ 317/2024 ದಾಖಲು ಆಗಿದ್ದರಿಂದ ಘಟನಾ ಸ್ಥಳದಲ್ಲಿ ಸಿಬ್ಬಂದಿಗಳಾದ ಚಾಸಾ.27 ಮತ್ತು 28 ರವರನ್ನು ನೇಮಿಸಿದ್ದು, ಅವರು ತಮ್ಮ ವರದಿಗಳನ್ನು ನೀಡಿದ್ದು, ಅದನ್ನು ಸ್ವೀಕರಿಸಿರುತ್ತೆನೆ. ನಂತರ ಆರೋಪಿ 2 ರವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೆನೆ.

11. ದಿಃ 06/01/2025 ರಂದು ಕಿಮ್ಸ ಆಸ್ಪತ್ರೆಯಲ್ಲಿ ಉಪಚಾರದಲ್ಲಿದ್ದ ಗಾಯಾಳು ಸಚಿನ್ ಹಾಗೂ ಆರೋಪಿತರು ಬಸವರಾಜ ಹಾಗೂ ಮೈಲಾರಿ ರವರ ರಕ್ತ ಹತ್ತಿದ ಬಟ್ಟೆಗಳನ್ನು ಚಾಸಾ.29 ರವರು ಹಾಜರುಪಡಿಸಿದರು. ಅವುಗಳನ್ನು ಚಾಸಾ.5 ಮತ್ತು 7 ರವರ ಸಮಕ್ಷಮ ಪಂಚನಾಮೆ ಮಾಡಿ ವಶಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನಿಶಾನೆ.ಪಿ.24 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.24(ಎ) ಎಂದು ಗುರ್ತಿಸಲಾಯಿತು. ಫೋಟೋ ತೆಗೆಸಿರುತ್ತೇನೆ. ಫೋಟೋವನ್ನು ನಿಶಾನೆ.ಪಿ.25 ಎಂದು ಗುರ್ತಿಸಲಾಯಿತು. ಸಿಡಿಯನ್ನು ನಿಶಾನೆ.ಪಿ.26 ಎಂದು ಗುರ್ತಿಸಲಾಯಿತು. ಅದೇ ದಿನ ಮುದ್ದೆಮಾಲುಗಳನ್ನು ನ್ಯಾಯಾಲಯಕ್ಕೆ ಜಮಾ ಮಾಡಿಸಿರುತ್ತೇನೆ.

12. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಸೀಲ್ ಮಾಡಲಾದ ಲಕೋಟೆಗಳನ್ನು ತೆರೆದು ನೋಡಲಾಗಿ ಅವುಗಳಲ್ಲಿ ಇರುವ 1) ಚಾಕಲೇಟ ಕಲರ್ ಸ್ಯಾಂಡೋ ಬನಿಯನ್ ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 9 ಎಂದು ಗುರ್ತಿಸಲಾಯಿತು. 2) ಡಾರ್ಕ ಗ್ರೇ ಕಲರ್ ಫುಲ್ ಸ್ಲೀವ್ ಶರ್ಟ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮುದ್ದೆಮಾಲು 1 ಎಂದು ಗುರ್ತಿಸಲಾಗಿದೆ. 3) ಬ್ಲೂ ಕಲರ್ ಜೀನ್ಸ ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 10 ಎಂದು ಗುರ್ತಿಸಲಾಯಿತು. 4) ಬ್ಲು ಬ್ಲಾಕ್ ಕಲರ್ ಸ್ಯಾಂಡೋ ಬನಿಯನ್ ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 11 ಎಂದು ಗುರ್ತಿಸಲಾಯಿತು. 5) ಬ್ಲಾಕ್

ಟ್ರ್ಯಾಕ್ ಪ್ಯಾಂಟ್ ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 12 ಎಂದು ಗುರ್ತಿಸಲಾಯಿತು. 6) ಆ್ಯಶ್ ಆ್ಯಂಡ್ ಲೈಟ್ ಎಲ್ಲೊ ಲೇೈನ್ಸ ವಿಥ್ ಬ್ಲ್ಯಾಕ್ ಆ್ಯಂಡ್ ಆರೆಂಜ್ ಕಲರ್ ಲುಂಗಿ ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 13 ಎಂದು ಗುರ್ತಿಸಲಾಯಿತು. 7) ಪಿಂಕ್ ಆ್ಯಂಡ್ ಲೈಟ್ ಬ್ಲೂ ಕಲರ್ ಚೆಕ್ಸ ಡಿಸೈನ್ ಟಾವೆಲ್ ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 14 ಎಂದು ಗುರ್ತಿಸಲಾಯಿತು. 8) ರೆಡ್ ಕಲರ್ ಅಂಡರವೇರ್ ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 15 ಎಂದು ಗುರ್ತಿಸಲಾಯಿತು.

13. ದಿಃ 06/01/2025 ರಂದು ಚಾಸಾ.30 ರವರು ಚಾಸಾ.16 ರವರ ಕೊಟ್ಟ ಪಿಎಂ ವರದಿಯನ್ನು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿರುತ್ತೆನೆ. ಪಿಎಂ ವರದಿಯನ್ನು ಈಗಾಗಲೇ ನಿಶಾನೆ.ಪಿ.12 ಎಂದು ಗುರ್ತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.12(ಬಿ) ಎಂದು ಗುರ್ತಿಸಲಾಯಿತು.

14. ಅದೇ ದಿನ ವೈದ್ಯಾಧಿಕಾರಿಗಳು ಮೃತಳ ಪಿಎಂ ಕಾಲಕ್ಕೆ ಸಂಗ್ರಹಿಸಿದ ವಿಸ್ರಾ ಗಳನ್ನು ಚಾಸಾ.30 ರವರು ಹಾಜರುಪಡಿಸಿದ್ದು, ಅವುಗಳನ್ನು ಚಾಸಾ.5 ಮತ್ತು 7 ರವರ ಸಮಕ್ಷಮ ಪಂಚನಾಮೆ ಮಾಡಿ ಜಪ್ತು ಪಡಿಸಿಕೊಂಡಿರುತ್ತೆನೆ. ಸದರಿ ಪಂಚನಾಮೆಯನ್ನು ನಿಶಾನೆ.ಪಿ.27 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.27(ಎ) ಎಂದು ಗುರ್ತಿಸಲಾಯಿತು. ಫೋಟೋ ತೆಗೆಸಿರುತ್ತೆನೆ. ಫೋಟೋವನ್ನು ನಿಶಾನೆ.ಪಿ.28 ಎಂದು

ಗುರ್ತಿಸಲಾಯಿತು. ಸಿಡಿಯನ್ನು ನಿಶಾನೆ.ಪಿ.29 ಎಂದು ಗುರ್ತಿಸಲಾಯಿತು. ಸಾಕ್ಷಿಯು ಮುದ್ದೆಮಾಲು 4 ಮತ್ತು 5 ಗಳನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ಚಾಸಾ.29 ರಿಂದ 34 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

15. ದಿಃ 07/01/2025 ರಂದು ಸದರಿ ಪ್ರಕರಣದ ಫಿರ್ಯಾದಿ ಚಾಸಾ.1 ಹಾಗೂ ಚಾಸಾ.9, ಆರೋಪಿ 1 ಮತ್ತು 2 ರವರ ಸಿಡಿಆರ್. ಗಳನ್ನು ಪಡೆದುಕೊಳ್ಳಲು ಕೋರಿಕೆ ಪತ್ರವನ್ನು ಎಸ್.ಪಿ. ರವರಿಗೆ ಕಳುಹಿಸಿಕೊಟ್ಟಿರುತ್ತೇನೆ.

16. ದಿಃ 08/01/2025 ರಂದು ಸಿಡಿಆರ್. ವಿವರಗಳು ಬಂದಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಸಿಡಿಆರ್. (5 ಪುಟಗಳು) ನಿಶಾನೆ.ಪಿ.30 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.30(ಎ) ಎಂದು ಗುರ್ತಿಸಲಾಯಿತು.

17. ಅದೇ ದಿನ ಚಾಸಾ.20 ತಹಶೀಲ್ದಾರ ರವರಿಗೆ ಘಟನಾ ಸ್ಥಳದ ಆಸ್ತಿಯ ಉತಾರ ಕೊಡಲು ಮನವಿಯನ್ನು ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಘಟನಾ ಸ್ಥಳದ ನಕಾಶೆ ಪೂರೈಸಲು ಚಾಸಾ.27 ರವರಿಗೆ ಪತ್ರವನ್ನು ಕಳುಹಿಸಿಕೊಟ್ಟಿರುತ್ತೇನೆ.

18. ದಿಃ 09/01/2025 ರಂದು ಸದರಿ ಪ್ರಕರಣದಲ್ಲಿ ಜಪ್ತಾದ 22 ಆರ್ಟಿಕಲ್ ಗಳನ್ನು ಆರ್.ಎಫ್.ಎಸ್.ಎಲ್. ಬೆಳಗಾವಿಗೆ ಚಾಸಾ.31 ರವರ ಮುಖಾಂತರ

ಕಳುಹಿಸಿಕೊಟ್ಟಿರುತ್ತೇನೆ. ಸದರಿ ಚಾಸಾ.31 ರವರು ಹಿಂಬರಹವನ್ನು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿರುತ್ತೇನೆ. ಚಾಸಾ.31 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

19. ದಿಃ 11/01/2025 ರಂದು ಆರೋಪಿ 1 ರವರು ಕಿಮ್ಸ್ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದು ಠಾಣಾ ಸಿಬ್ಬಂದಿ ನನ್ನ ಮುಂದೆ ಹಾಜರುಪಡಿಸಿದ್ದು, ವಿಚಾರಣೆ ಮಾಡಿ ಸ್ವ ಖುಷಿ ಹೇಳಿಕೆಯನ್ನು ಪಡೆದಿರುತ್ತೇನೆ. ಸ್ವ-ಖುಷಿ ಹೇಳಿಕೆಯಲ್ಲಿ ಅಪರಾಧ ಮಾಡಿದ ಬಗ್ಗೆ ಒಪ್ಪಿಕೊಂಡಿದ್ದರಿಂದ ದಸ್ತಗಿರಿ ಮಾಡಿ ನಿಯಮ ಪಾಲಿಸಿ ಯೋಗ್ಯ ಬೆಂಗಾವಲಿನಲ್ಲಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಚಾಸಾ.23 ಮತ್ತು 24 ರವರು ವರದಿಯನ್ನು ಕೊಟ್ಟಿದ್ದು ಸ್ವೀಕರಿಸಿರುತ್ತೇನೆ. ಅದೇ ದಿನ ಚಾಸಾ.9 ರವರ ಹೇಳಿಕೆಯನ್ನು ನಿಶಾನೆ.ಪಿ.9 ರಂತೆ ಪಡೆದಿರುತ್ತೇನೆ.

20. ದಿಃ 14/01/2025 ರಂದು ಸದರಿ ಪ್ರಕರಣದಲ್ಲಿ ಗಾಯಾಳು ಸಚಿನ್ ರವರ ಗಾಯದ ಪ್ರಮಾಣ ಪತ್ರವನ್ನು ಪಡೆಯಲು ಚಾಸಾ.19 ರವರಿಗೆ ಕೋರಿಕೆ ಪತ್ರ ಕಳುಹಿಸಿಕೊಟ್ಟಿರುತ್ತೇನೆ. ದಿಃ 15/01/2025 ರಂದು ಅದರ ಸ್ವೀಕೃತಿಯನ್ನು ಪಡೆದಿರುತ್ತೇನೆ.

21. ದಿಃ 29/01/2025 ರಂದು ಈ ಪ್ರಕರಣದಲ್ಲಿ ಗಾಯಾಳು ಚಾಸಾ.9 ಸಚಿನ್ ರವರ ಗಾಯದ ಪ್ರಮಾಣ ಪತ್ರವನ್ನು ಪೂರೈಸುವಂತೆ ಚಾಸಾ.19 ರವರಿಗೆ ಇನ್ನೊಂದು

ಕೋರಿಕೆ ಪತ್ರ ಕಳುಹಿಸಿಕೊಟ್ಟಿರುತ್ತೇನೆ. ದಿಃ 01/02/2025 ರಂದು ರಂದು ಅದರ ಸ್ವೀಕೃತಿಯನ್ನು ಪಡೆದಿರುತ್ತೇನೆ.

22. ದಿಃ 04/02/2025 ರಂದು ಸದರಿ ಪ್ರಕರಣದಲ್ಲಿ ಆರ್.ಎಫ್.ಎಸ್.ಎಲ್. ಬೆಳಗಾವಿ ರವರಿಂದ ವರದಿಗಳು ಬಂದಿದ್ದು, ಅವುಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿಗಳನ್ನು ಈಗ ನಿಶಾನೆ.ಪಿ.31 ಮತ್ತು 32 ಎಂದು, ಸಾಕ್ಷಿಯ ಸಹಿಗಳನ್ನು ನಿಶಾನೆ.ಪಿ.31(ಎ) ಮತ್ತು 32(ಎ) ಎಂದು ಗುರ್ತಿಸಲಾಯಿತು. ದಿಃ 08/02/2025 ರಂದು ಚಾಸಾ.14 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

23. ದಿಃ 10/02/2025 ರಂದು ಚಾಸಾ.21 ರವರು ಘಟನಾ ಸ್ಥಳದ ನಕಾಶೆಯನ್ನು ಕೊಟ್ಟಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ನಕಾಶೆಯನ್ನು ಈಗ ನಿಶಾನೆ.ಪಿ.33 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.33(ಎ) ಎಂದು ಗುರ್ತಿಸಲಾಯಿತು.

24. ದಿಃ 02/03/2025 ರಂದು ಚಾಸಾ.9 ರವರ ಗಾಯದ ಪ್ರಮಾಣ ಪತ್ರ ಹಾಗೂ ಕೇಸ್ ಶೀಟ್ ನ್ನು ಹಾಜರುಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ ನಿಶಾನೆ.ಪಿ.15 ಎಂದು ಗುರ್ತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.15(ಬಿ) ಎಂದು ಗುರ್ತಿಸಲಾಯಿತು. ಕೇಸ್ ಶೀಟ್ ನ್ನು

(6 ಪುಟಗಳು) ಈಗ ನಿಶಾನೆ.ಪಿ.34 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.34(ಎ) ಎಂದು ಗುರ್ತಿಸಲಾಯಿತು.

25. ದಿಃ 04/03/2025 ರಂದು ಚಾಸಾ.20 ರವರು ಉತಾರ ವನ್ನು ಹಾಜರುಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೆನೆ. ಸದರಿ ಉತಾರವನ್ನು (3 ಪುಟಗಳು) ಈಗ ನಿಶಾನೆ.ಪಿ.35 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.35(ಎ) ಎಂದು ಗುರ್ತಿಸಲಾಯಿತು. ಅದೇ ದಿನ ಸದರಿ ಪ್ರಕರಣದಲ್ಲಿ ಗಾಯದ ಬಗ್ಗೆ ಅಂತಿಮ ಅಭಿಪ್ರಾಯ ಹಾಗೂ ಸಿಡಿಆರ್. ಗಳ 65-ಬಿ ಪ್ರಮಾಣ ಪತ್ರ ಪಡೆಯುವುದನ್ನು ಬಾಕಿ ಇಟ್ಟು ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರ ಸಲ್ಲಿಸಿರುತ್ತೆನೆ.

26. ದಿಃ 02/09/2025 ರಂದು ಏರ್ಟೆಲ್ ಹಾಗೂ ಜಿಯೋ ಕಂಪನಿ ರವರು ಕಲಂ 63(4)(ಸಿ) ಪ್ರಮಾಣ ಪತ್ರ ನೀಡಿರುವುದನ್ನು ಸ್ವೀಕರಿಸಿರುತ್ತೆನೆ. ಏರ್ಟೆಲ್ ಕಂಪನಿ ರವರು ಕೊಟ್ಟ ಪ್ರಮಾಣ ಪತ್ರವನ್ನು ಈಗ ನಿಶಾನೆ.ಪಿ.36 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.36(ಎ) ಎಂದು ಗುರ್ತಿಸಲಾಯಿತು. ಜಿಯೋ ಕಂಪನಿ ರವರು ಕೊಟ್ಟ ಪ್ರಮಾಣ ಪತ್ರವನ್ನು ಈಗ ನಿಶಾನೆ.ಪಿ.37 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.37(ಎ) ಎಂದು ಗುರ್ತಿಸಲಾಯಿತು.

27. ದಿಃ 24/06/2025 ರಂದು ಚಾಸಾ.19 ರವರು ಚಾಕು ಮತ್ತು ಕಟ್ಟಿಗೆ ಅಂತಿಮ ಅಭಿಪ್ರಾಯವನ್ನು ಕೊಟ್ಟಿದ್ದು, ಸ್ವೀಕರಿಸಿರುತ್ತೆನೆ. ಸದರಿ ಅಂತಿಮ ಅಭಿಪ್ರಾಯವನ್ನು ಈಗಾಗಲೇ ನಿಶಾನೆ.ಪಿ.14 ಮತ್ತು 16 ಎಂದು ಗುರ್ತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ.14(ಬಿ) ಮತ್ತು 16(ಬಿ) ಎಂದು ಗುರ್ತಿಸಲಾಯಿತು.

28. ದಿಃ 06/10/2025 ರಂದು ನಿಶಾನೆ.ಪಿ.14, 16, 36 ಮತ್ತು 37 ಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೆನೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಜೆ.ಸಿ.ಬಿ. ವಕೀಲರಿಂದಃ</u>**

29. ದಿಃ 31/12/2024 ರಂದು ಈ ಪ್ರಕರಣದ ತನಿಖೆಯನ್ನು ಚಾಸಾ.36 ರವರಿಂದ ಪಡೆದು ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಘಟನಾ ಸ್ಥಳದಲ್ಲಿ ವಸ್ತುಗಳು ನಾಶವಾಗದಂತೆ ಚಾಸಾ.27 ಹಾಗೂ 28 ರವರನ್ನು ನೇಮಿಸಿ, ಈ ಪ್ರಕರಣದಲ್ಲಿ ಮೃತರ ಶವವನ್ನು ಕಲಘಟಗಿಯ ಸರ್ಕಾರಿ ಆಸ್ಪತ್ರೆ ಶವಾಗಾರದಲ್ಲಿ ಇದ್ದುದರಿಂದ ಚಾಸಾ.32 ರವರನ್ನು ಬೆಂಗಾವಲಿಗಾಗಿ ನೇಮಿಸಿದೆನು ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

30. ಅದೇ ದಿನ ಬೆಳಿಗ್ಗೆ 11.00 ಗಂಟೆಗೆ ಚಾಸಾ.1 ರವರೊಂದಿಗೆ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಮೃತಳ ಶವ ಪಂಚನಾಮೆಯನ್ನು ಚಾಸಾ.2 ಮತ್ತು 3 ರವರ

ಸಮಕ್ಷಮ ಜರುಗಿಸಿರುತ್ತೆನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ. ನಂತರ ಮೃತಳ ಶವದ ಪಿಎಂ ಮಾಡಿಸುವ ಕುರಿತು ಕೋರಿಕೆ ಕೊಟ್ಟಿರುತ್ತೆನೆ, ನಂತರ ಚಾಸಾ.33 ರವರಿಂದ ಕಲಂ 63(4)(ಸಿ) ಬಿಎನ್.ಎಸ್.ಎಸ್. ಪ್ರಮಾಣ ಪತ್ರ ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯನುಡಿದಿದ್ದೇನೆ ಅಂದರೆ ಸರಿಯಲ್ಲ.

31. ದಿಃ 31/12/2024 ರಂದು ಚಾಸಾ.1 ರವರ ಪುನಃ ಹೇಳಿಕೆಯನ್ನು ನಿಶಾನೆ.ಪಿ.8 ರಂತೆ ಪಡೆದುಕೊಂಡಿರುತ್ತೆನೆ, ನಂತರ ಅದೇ ದಿನ ಚಾಸಾ.1 ರವರು ತೋರಿಸಿದ ಘಟನಾ ಸ್ಥಳವನ್ನು ಪರಿಶೀಲಿಸಿ ಚಾಸಾ.2 ಮತ್ತು 4 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿ ಘಟನಾ ಸ್ಥಳದಲ್ಲಿಯ ವಸ್ತುಗಳಾದ ಸುಮಾರು 4 ಫೂಟ್ 3 ಇಂಚು ಉದ್ದ ಹಾಗೂ ಅಲ್ಲಲ್ಲಿ ರಕ್ತ ಹತ್ತಿದ ಕಾಡು ಕಟ್ಟಿಗೆ ಬಡಿಗೆ, ಸುಮಾರು 14 ಇಂಚು ಉದ್ದ ಕಟ್ಟಿಗೆ ಹಿಡಿಕೆಯುಳ್ಳ ಒಂದು ಬಡಿಗೆ ಹರಿತವಾಗಿರುವ ಮುಂದೆ ಚೂಪು ಇರುವ ಅಲ್ಲಲ್ಲಿ ರಕ್ತ ಹತ್ತಿದ ಚಾಕು, ರಕ್ತ ಹತ್ತಿದ ಮಣ್ಣು, ರಕ್ತ ಹತ್ತದೇ ಇರುವ ಮಣ್ಣು, ಇವುಗಳನ್ನು ಸುಕೋ ಅಧಿಕಾರಿ ಚಾಸಾ.22 ರವರಿಂದ ಪ್ಯಾಕ್ ಮಾಡಿ ಸೀಲ್ ಮಾಡಿಸಿರುತ್ತೆನೆ ಎಂದು ಸುಳ್ಳು ಸಾಕ್ಷ್ಯನುಡಿದಿದ್ದೇನೆ ಅಂದರೆ ಸರಿಯಲ್ಲ. ನಂತರ ಪ್ರಕರಣದಲ್ಲಿ ಸಾಕ್ಷಿದಾರರಾದ ಚಾಸಾ.2, 8, 10 ರಿಂದ 15 ರವರ ಹೇಳಿಕೆಗಳನ್ನು ಪಡೆದಿರುತ್ತೆನೆ, ಚಾಸಾ.15 ರವರು ನನ್ನ ಮುಂದೆ ನಿಶಾನೆ.ಪಿ.11 ರಂತೆ ಹೇಳಿಕೆ ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ. ನಂತರ ಈ

ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ನ್ಯಾಯಾಲಯಕ್ಕೆ ಪಿ.ಎಫ್ ನಂ.188/2024 ದಾಖಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

32. ನಂತರ ಅದೇ ದಿನ ಚಾಸಾ.32 ರವರು ತಮ್ಮ ವರದಿಯೊಂದಿಗೆ ಪಿಎಂ ಪರೀಕ್ಷೆ ನಂತರ ಠಾಣೆಗೆ ಬಂದು ಮೃತಳ ದೇಹವನ್ನು ವಾರಸುದಾರರಿಗೆ ನೀಡಿದ ಕುರಿತು ಪಡೆದ ಪಾವತಿ ರಸೀದಿ ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿರುತ್ತೇನೆ, ನಂತರ ಅದೇ ದಿನ ಚಾಸಾ.32 ಮತ್ತು 35 ರವರ ಹೇಳಿಕೆಯನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ. ನಂತರ ಅದೇ ದಿನ ಚಾಸಾ.29 ರವರಿಗೆ ಗಾಯಾಳು ಹಾಗೂ ಆರೋಪಿಯ ರಕ್ತ ಹತ್ತಿದ ಬಟ್ಟೆಯನ್ನು ಪ್ಯಾಕ ಮಾಡಿ ಪೂರೈಸುವಂತೆ ಮನವಿ ಪತ್ರ ಕೊಟ್ಟು ಕಿಮ್ಸ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ. ನಂತರ ಅದೇ ದಿನ ಚಾಸಾ.23 ರಿಂದ 26 ರವರಿಗೆ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ಆರೋಪಿ 1 ಮತ್ತು 2 ರವರ ಬೆಂಗಾವಲಿಗಾಗಿ ನೇಮಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

33. ದಿಃ 02/01/2025 ರಂದು ಆರೋಪಿ 2 ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದರಿಂದ ಚಾಸಾ.25 ಮತ್ತು 26 ರವರು ಆರೋಪಿತ 2 ನನ್ನ ಮುಂದೆ ಹಾಜರುಪಡಿಸಿದ್ದರಿಂದ ಆತನಿಗೆ ವಿಚಾರಣೆ ಮಾಡಿ, ಸ್ವ ಖುಷಿ ಹೇಳಿಕೆಯನ್ನು ಪಡೆದುಕೊಂಡು ಅದರಲ್ಲಿ ಅಪರಾಧ ಮಾಡಿದ ಬಗ್ಗೆ ಆರೋಪಿ ಒಪ್ಪಿಕೊಂಡಿದ್ದರಿಂದ

ಆತನನ್ನು ದಸ್ತಗಿರಿ ಮಾಡಿ ನಿಯಮಗಳನ್ನು ಪಾಲಿಸಿ ಯೋಗ್ಯ ಬೆಂಗಾವಲಿನಲ್ಲಿ ಠಾಣೆಯಲ್ಲಿ ಇರಿಸಿದೆನು, ಅದೇ ದಿನ ಚಾಸಾ.25 ಮತ್ತು 26 ರವರ ಹೇಳಿಕೆಯನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

34. ದಿಃ 03/01/2025 ರಂದು ಕೌಂಟರ್ ಕೇಸ್ ಪ್ರಕರಣ 317/2024 ದಾಖಲು ಆಗಿದ್ದರಿಂದ ಘಟನಾ ಸ್ಥಳದಲ್ಲಿ ಸಿಬ್ಬಂದಿಗಳಾದ ಚಾಸಾ.27 ಮತ್ತು 28 ರವರನ್ನು ನೇಮಿಸಿದ್ದು, ಅವರು ತಮ್ಮ ವರದಿಗಳನ್ನು ನೀಡಿದ್ದು, ಅದನ್ನು ಸ್ವೀಕರಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

35. ದಿಃ 06/01/2025 ರಂದು ಕಿಮ್ಸ ಆಸ್ಪತ್ರೆಯಲ್ಲಿ ಉಪಚಾರದಲ್ಲಿದ್ದ ಗಾಯಾಳು ಸಚಿನ್ ಹಾಗೂ ಆರೋಪಿತರು ಬಸವರಾಜ ಹಾಗೂ ಮೈಲಾರಿ ರವರ ರಕ್ತ ಹತ್ತಿದ ಬಟ್ಟೆಗಳನ್ನು ಚಾಸಾ.29 ರವರು ಹಾಜರುಪಡಿಸಿದರು, ಅವುಗಳನ್ನು ಚಾಸಾ.5 ಮತ್ತು 7 ರವರ ಸಮಕ್ಷಮ ಪಂಚನಾಮೆ ಮಾಡಿ ವಶಪಡಿಸಿಕೊಂಡಿರುತ್ತೇನೆ, ಅದೇ ದಿನ ಮುದ್ದೆಮಾಲುಗಳನ್ನು ನ್ಯಾಯಾಲಯಕ್ಕೆ ಜಮಾ ಮಾಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

36. ದಿಃ 06/01/2025 ರಂದು ಚಾಸಾ.30 ರವರು ಚಾಸಾ.16 ರವರ ಕೊಟ್ಟ ಪಿಎಂ ವರದಿಯನ್ನು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ

ನುಡಿದಿದ್ದೇನೆ ಅಂದರೆ ಸರಿಯಲ್ಲ. ಅದೇ ದಿನ ವೈದ್ಯಾಧಿಕಾರಿಗಳು ಮೃತಳ ಪಿಎಂ ಕಾಲಕ್ಕೆ ಸಂಗ್ರಹಿಸಿದ ವಿಸ್ರಾ ಗಳನ್ನು ಚಾಸಾ.30 ರವರು ಹಾಜರುಪಡಿಸಿದ್ದು, ಅವುಗಳನ್ನು ಚಾಸಾ.5 ಮತ್ತು 7 ರವರ ಸಮಕ್ಷಮ ಪಂಚನಾಮೆ ಮಾಡಿ ಜಪ್ತು ಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ. ಅದೇ ದಿನ ಚಾಸಾ.29 ರಿಂದ 34 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

37. ದಿಃ 07/01/2025 ರಂದು ಸದರಿ ಪ್ರಕರಣದ ಫಿರ್ಯಾದಿ ಚಾಸಾ.1 ಹಾಗೂ ಚಾಸಾ.9, ಆರೋಪಿ 1 ಮತ್ತು 2 ರವರ ಸಿಡಿಆರ್. ಗಳನ್ನು ಪಡೆದುಕೊಳ್ಳಲು ಕೋರಿಕೆ ಪತ್ರವನ್ನು ಎಸ್.ಪಿ. ರವರಿಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

38. ದಿಃ 08/01/2025 ರಂದು ಸಿಡಿಆರ್. ವಿವರಗಳು ಬಂದಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ. ಅದೇ ದಿನ ಚಾಸಾ.20 ತಹಶೀಲ್ದಾರ ರವರಿಗೆ ಘಟನಾ ಸ್ಥಳದ ಆಸ್ತಿಯ ಉತಾರ ಕೊಡಲು ಮನವಿಯನ್ನು ಕಳುಹಿಸಿಕೊಟ್ಟಿರುತ್ತೇನೆ, ಅದೇ ದಿನ ಘಟನಾ ಸ್ಥಳದ ನಕಾಶೆ ಪೂರೈಸಲು ಚಾಸಾ.27 ರವರಿಗೆ ಪತ್ರವನ್ನು ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

39. ದಿಃ 09/01/2025 ರಂದು ಸದರಿ ಪ್ರಕರಣದಲ್ಲಿ ಜಪ್ತಾದ 22 ಆರ್ಟಿಕಲ್ ಗಳನ್ನು ಆರ್.ಎಫ್.ಎಸ್.ಎಲ್. ಬೆಳಗಾವಿಗೆ ಚಾಸಾ.31 ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ, ಸದರಿ ಚಾಸಾ.31 ರವರು ಹಿಂಬರಹವನ್ನು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿರುತ್ತೇನೆ, ಚಾಸಾ.31 ರವರ ಹೇಳಿಕೆಯನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

40. ದಿಃ 11/01/2025 ರಂದು ಆರೋಪಿ 1 ರವರು ಕಿಮ್ಸ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದು ಠಾಣಾ ಸಿಬ್ಬಂದಿ ನನ್ನ ಮುಂದೆ ಹಾಜರುಪಡಿಸಿದ್ದು, ವಿಚಾರಣೆ ಮಾಡಿ ಸ್ವ ಖುಷಿ ಹೇಳಿಕೆಯನ್ನು ಪಡೆದಿರುತ್ತೇನೆ, ಸ್ವ-ಖುಷಿ ಹೇಳಿಕೆಯಲ್ಲಿ ಅಪರಾಧ ಮಾಡಿದ ಬಗ್ಗೆ ಒಪ್ಪಿಕೊಂಡಿದ್ದರಿಂದ ದಸ್ತಗಿರಿ ಮಾಡಿ ನಿಯಮ ಪಾಲಿಸಿ ಯೋಗ್ಯ ಬೆಂಗಾವಲಿನಲ್ಲಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ, ಅದೇ ದಿನ ಚಾಸಾ.23 ಮತ್ತು 24 ರವರು ವರದಿಯನ್ನು ಕೊಟ್ಟಿದ್ದು ಸ್ವೀಕರಿಸಿರುತ್ತೇನೆ, ಅದೇ ದಿನ ಚಾಸಾ.9 ರವರ ಹೇಳಿಕೆಯನ್ನು ನಿಶಾನೆ.ಪಿ.9 ರಂತೆ ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

41. ದಿಃ 14/01/2025 ರಂದು ಸದರಿ ಪ್ರಕರಣದಲ್ಲಿ ಗಾಯಾಳು ಸಚಿನ್ ರವರ ಗಾಯದ ಪ್ರಮಾಣ ಪತ್ರವನ್ನು ಪಡೆಯಲು ಚಾಸಾ.19 ರವರಿಗೆ ಕೋರಿಕೆ ಪತ್ರ

ಕಳುಹಿಸಿಕೊಟ್ಟಿರುತ್ತೇನೆ, ದಿಃ 15/01/2025 ರಂದು ಅದರ ಸ್ವೀಕೃತಿಯನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

42. ದಿಃ 29/01/2025 ರಂದು ಈ ಪ್ರಕರಣದಲ್ಲಿ ಗಾಯಾಳು ಚಾಸಾ.9 ಸಚಿನ್ ರವರ ಗಾಯದ ಪ್ರಮಾಣ ಪತ್ರವನ್ನು ಪೂರೈಸುವಂತೆ ಚಾಸಾ.19 ರವರಿಗೆ ಇನ್ನೊಂದು ಕೋರಿಕೆ ಪತ್ರ ಕಳುಹಿಸಿಕೊಟ್ಟಿರುತ್ತೇನೆ, ದಿಃ 01/02/2025 ರಂದು ರಂದು ಅದರ ಸ್ವೀಕೃತಿಯನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

43. ದಿಃ 04/02/2025 ರಂದು ಸದರಿ ಪ್ರಕರಣದಲ್ಲಿ ಆರ್.ಎಫ್.ಎಸ್.ಎಲ್. ಬೆಳಗಾವಿ ರವರಿಂದ ವರದಿಗಳು ಬಂದಿದ್ದು, ಅವುಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

44. ದಿಃ 08/02/2025 ರಂದು ಚಾಸಾ.14 ರವರ ಹೇಳಿಕೆಯನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

45. ದಿಃ 10/02/2025 ರಂದು ಚಾಸಾ.21 ರವರು ಘಟನಾ ಸ್ಥಳದ ನಕಾಶೆಯನ್ನು ಕೊಟ್ಟಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

46. ದಿಃ 02/03/2025 ರಂದು ಚಾಸಾ.9 ರವರ ಗಾಯದ ಪ್ರಮಾಣ ಪತ್ರ ಹಾಗೂ ಕೇಸ್ ಶೀಟ್ ನ್ನು ಹಾಜರುಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

47. ದಿಃ 04/03/2025 ರಂದು ಚಾಸಾ.20 ರವರು ಉತಾರ ವನ್ನು ಹಾಜರುಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೆನೆ, ಅದೇ ದಿನ ಸದರಿ ಪ್ರಕರಣದಲ್ಲಿ ಗಾಯದ ಬಗ್ಗೆ ಅಂತಿಮ ಅಭಿಪ್ರಾಯ ಹಾಗೂ ಸಿಡಿಆರ್. ಗಳ 65-ಬಿ ಪ್ರಮಾಣ ಪತ್ರ ಪಡೆಯುವುದನ್ನು ಬಾಕಿ ಇಟ್ಟು ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರ ಸಲ್ಲಿಸಿರುತ್ತೆನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

48. ದಿಃ 02/09/2025 ರಂದು ಏರ್ಟೆಲ್ ಹಾಗೂ ಜಿಯೋ ಕಂಪನಿ ರವರು ಕಲಂ 63(4)(ಸಿ) ಪ್ರಮಾಣ ಪತ್ರ ನೀಡಿರುವುದನ್ನು ಸ್ವೀಕರಿಸಿರುತ್ತೆನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

49. ದಿಃ 24/06/2025 ರಂದು ಚಾಸಾ.19 ರವರು ಚಾಕು ಮತ್ತು ಕಟ್ಟಿಗೆ ಅಂತಿಮ ಅಭಿಪ್ರಾಯವನ್ನು ಕೊಟ್ಟಿದ್ದು, ಸ್ವೀಕರಿಸಿರುತ್ತೆನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

50. ದಿಃ 06/10/2025 ರಂದು ನಿಶಾನೆ.ಪಿ.14, 16, 36 ಮತ್ತು 37 ಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೆನೆ ಎಂದು ಸುಳ್ಳು ಸಾಕ್ಷ್ಯನುಡಿದಿದ್ದೇನೆ ಅಂದರೆ ಸರಿಯಲ್ಲ.

51. ನಿಶಾನೆ.ಪಿ.4 ರ ಮೂಲಕ ವಶಪಡಿಸಿಕೊಂಡಿದ್ದೆ ಎನ್ನಲಾದ ವಸ್ತುಗಳ ಹೊರತಾಗಿ ಬೇರೆ ವಸ್ತುಗಳು ಸ್ಥಳದಲ್ಲಿ ಇರಲಿಲ್ಲ ಹಾಗೂ ಯಾವ ಬೇರೆ ವಸ್ತುಗಳನ್ನು ಸಹ ನಾನು ಜಪ್ತುಪಡಿಸಿಕೊಂಡಿರಲಿಲ್ಲ. ಘಟನೆಯ ಕುರಿತು ಬೇರೆ ಬೇರೆ ವ್ಯಕ್ತಿಗಳು ವಿವರಣೆ ಕೊಡುವಾಗ ಘಟನೆಯ ವಿವರಣೆ ಬೇರೆ ಬೇರೆ ತರಹ ಕೊಡುತ್ತಾರೆ ಅಂದರೆ ಸರಿಯಲ್ಲ. ಘಟನೆಯ ಕುರಿತು ಬೇರೆ ಬೇರೆ ವ್ಯಕ್ತಿಗಳು ವಿವರಣೆ ಕೊಡುವಾಗ ಘಟನೆಯ ವಿವರಣೆ ಬೇರೆ ಬೇರೆ ತರಹ ಕೊಡುತ್ತಾರೆ ಎನ್ನುವ ವಿಷಯ ನನಗೆ ಗೊತ್ತಿದ್ದರು ಸಹ ನಾನು ಅದು ತಪ್ಪು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಅಂದರೆ ಸರಿಯಲ್ಲ.

52. ನಾನು ಮುದ್ದೆಮಾಲು 2 ರ ಫಿಂಗರ್ ಪ್ರಿಂಟ್ ಗಾಗಿ ಕೋರಿಕೆ ಪತ್ರ ನೀಡಿರಲಿಲ್ಲ. ಮುದ್ದೆಮಾಲು 2 ನ್ನು ಈ ಪ್ರಕರಣಕ್ಕೆ ಅನುಕೂಲವಾಗಲೆಂದು ಸೃಷ್ಟಿ ಮಾಡಿಕೊಂಡಿದ್ದರಿಂದ ಅದರ ಕುರಿತು ಫಿಂಗರ್ ಪ್ರಿಂಟ್ ಗಾಗಿ ಕೋರಿಕೆ ಪತ್ರ ನೀಡಿರಲಿಲ್ಲ ಅಂದರೆ ಸರಿಯಲ್ಲ. ಈ ಪ್ರಕರಣದ ಮುದ್ದೆಮಾಲು ಗಳಿಗೆ ಹಾಗೂ ಆರೋಪಿತರಿಗೆ ಯಾವುದೇ ರೀತಿಯ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಸಾಕ್ಷಿದಾರರು ಹೇಳಿಕೆಗಳನ್ನು ನೀಡಿರಲಿಲ್ಲ ಅಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೆ ಅನುಕೂಲವಾಗಲೆಂದು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೆನೆ ಅಂದರೆ ಸರಿಯಲ್ಲ.

ಅಂತಿಮ ವರದಿಯ ಕಾಲಂ 17 ರಲ್ಲಿ ವಿವರಿಸಿದ ಘಟನೆಗೂ ಮತ್ತು ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ತಪ್ಪು ತಿಳುವಳಿಕೆಯಿಂದ ದಾಖಲಿಸಿಕೊಳ್ಳಲಾದ ಪ್ರಕರಣಕ್ಕೆ ಅನುಕೂಲವಾಗಲೆಂದು ನಾನು ಸುಳ್ಳು ತನಿಖೆ ನಡೆಸಿ ಸುಳ್ಳು ದೋಷಾರೋಪಣೆ ಪತ್ರ ಸಲ್ಲಿಸಿದ್ದೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಅದೆ.

**(ಶ್ರೀಮತಿ ಜರೀನಾ)**
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು ಸಿ.ಬಿ.ಐ./ಎ.ಸಿ.ಬಿ.,
ಲೋಕಾಯುಕ್ತ, ಧಾರವಾಡ.